ಅಯ್ಯನ ಮುಖದಲ್ಲಿದ್ದ ಆತಂಕ ಕಡಿಮೆ ಆಯಿತು. ಒಮ್ಮೆ ದೀರ್ಘ ನಿಟ್ಟುಸಿರು ಬಿಟ್ಟರು.

ನಾನು ಚೆನ್ನಾಗೇ ಇದೀನಿ... ಸಲೀಸಾಗಿ ನಡಕೊಂಡು ಹೋಗ್ತೀನಿ ಅಂತ ಬೆಳಿಗ್ಗೆ ರೌಂಡ್ಸ್‌ಗೆ ಬಂದಿದ್ದ ಡಾಕ್ಟರ್ ಹತ್ತಿರ ಅಯ್ಯ ಹೇಳಿದಕ್ಕೆ ಅವರು ನೀವು ಇನ್ನೂ ಒಂದೆರಡು ವಾರವಾದರೂ ಆಸ್ಪತ್ರೆಯಲ್ಲೇ ಇರಬೇಕು. ಊರಿಗೆ ಹೋಗಿ ಮಾಡೋದೇನಿದೆ ಅಂತ ಕೇಳಿದ ಮೇಲೆ ಅಯ್ಯಗೆ ನಿರಾಸೆ ಆಗಿತ್ತು.

ಸಿಟಿಯಿಂದ ದೂರ ಇರುವ ಈ ಆಸ್ಪತ್ರೆಗೆ ಬರೋರೆಲ್ಲ ಬಡವರೇ. ಅಯ್ಯ ಯಾವಾಗಲೂ ಮುಸುಕು ಹಾಕಿ ಮಲಗಿಯೇ ಇರುತ್ತಿದ್ದರು. ಅವರು ಯಾರು ಅನ್ನೋದು ಆಸ್ಪತ್ರೆ ಸಿಬ್ಬಂದಿಗೂ ಸರಿಯಾಗಿ ಗೊತ್ತಿಲ್ಲ! ದೊಡ್ಡ ಡಾಕ್ಟರೇ ಮೈನರ್ ಓಟಿಯಲ್ಲಿ ಅವರಿಗೆ ಡ್ರೆಸ್ಸಿಂಗ್ ಮಾಡುತ್ತಿದ್ದರು. ಅವರು ಇರೋ ಜನರಲ್ ವಾರ್ಡಿನಲ್ಲಿ ಆರು ಬೆಡ್‌ಗಳಿವೆ. ಅಲ್ಲಿದ್ದ ಐದು ಜನಕ್ಕೆ ಅಲ್ಸರ್‌ಗೆ ಆಪರೇಷನ್ ಆಗಿದೆ. ಇವರೂ ಅಲ್ಸರ್‌ಗೆ ಆಪರೇಷನ್ ಮಾಡಿಸಿಕೊಂಡಿದ್ದಾರೆ ಅಂತ ಉಳಿದವರು ತಿಳಿದುಕೊಂಡಿದ್ದಾರೆ. ಸಂಜೆ ಹೊತ್ತಲ್ಲಿ ಆಸ್ಪತ್ರೆಗೆ ಬಂದು ಹೋಗುವ ಪೇಶಂಟ್‌ಗಳ ಮನೆಯವರನ್ನು ಬಿಟ್ಟರೆ ಬೇರೆ ಯಾರೂ ಬಂದಂತಿಲ್ಲ. ಹಾಗೆ ಬಂದವರು ಅಯ್ಯ ಅವರನ್ನು ನೋಡುತ್ತ ಏವೂರು ಅಂತ ಕೇಳಿದ್ದನ್ನು ಬಿಟ್ಟರೆ ಹೆಚ್ಚಿನ ಮಾತುಕತೆ ಇಲ್ಲ. ಅವರ ಪ್ರಶ್ನೆಗೆ ಅಯ್ಯ ಕ್ಷೀಣ ಧ್ವನಿಯಲ್ಲಿ ಏನೋ ಗೊಣಗುತ್ತಾರೆ. ಅವರು ಏನು ಹೇಳಿದರು ಅನ್ನೋದು ವಿಚಾರಿಸಿದವರಿಗೂ ಅರ್ಥ ಆಗೋದಿಲ್ಲ. ಅಷ್ಟರಲ್ಲಿ ಅಯ್ಯ ಮಗ್ಗುಲು ಬದಲಿಸುತ್ತಾರೆ. ಹದಿನೈದು ದಿನಗಳಿಂದ ಹೀಗೆ ಆಗುತ್ತಿದೆ. ಒಬ್ಬ ಮಾತ್ರ, ನಿಮಗೆ ವಯಸ್ಸಾಯ್ತು... ಇನ್ನಾದರೂ ಖಾರ ತಿನ್ನೋದು ಕಡಿಮೆ ಮಾಡಿ ಅಂತ ಸಲಹೆ ಕೊಟ್ಟಿದ್ದ. ಅದಕ್ಕೆ ಅಯ್ಯ ಆಗಲಿ ಎನ್ನುವಂತೆ ತಲೆ ಆಡಿಸಿ ಮುಗುಳ್ನಕ್ಕಿದ್ದರು. ಅಯ್ಯ ಮಾತಾಡಿದ್ದು ಕೇಶವ ರೆಡ್ಡಿ ಜೊತೆ ಮಾತ್ರ. ಅದೂ ಕೆಲವೇ ವಾಕ್ಯಗಳು. ರೆಡ್ಡಿ ಸಹ ಅಯ್ಯನಿಗಷ್ಟೇ ಕೇಳಿಸುವಂತೆ ತಗ್ಗಿಸಿದ ಧ್ವನಿಯಲ್ಲಿ ಅವರ ಕಿವಿ ಬಳಿ ಮುಖ ಇಟ್ಟು ಮಾತಾಡಿದ್ದ.

ರೆಡ್ಡಿ ಹೋದ ಮೇಲೆ ಅಯ್ಯ ಸ್ವಲ್ಪ ಹೊತ್ತು ಮಲಗಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಈಗ ಮಲಗಿದರೆ ಸರಿರಾತ್ರಿ ನಂತರ ನಿದ್ದೆ ಹತ್ತೋದಿಲ್ಲ ಅನ್ನಿಸಿ ಹಾಗೇ ಕಣ್ಣು ಮುಚ್ಚಿಕೊಂಡರು.

ಅವರಿಗೆ ಒಂದೇ ಚಿಂತೆ. ನಂದ್ಯಾಲದ ಮಿಲ್ ಹೊಡೆದಾಟದಲ್ಲಿ, ಬಾಂಬ್ ಬ್ಲಾಸ್ಟ್‌ನಲ್ಲಿ ಎಷ್ಟು ಜನ ಸತ್ತರು. ಬಚಾವಾದವರು ಹೇಗಿದ್ದಾರೆ, ಎಲ್ಲಿದ್ದಾರೆ ಅನ್ನೋ ಚಿಂತೆ. ಆ ವಿಚಾರ ನಂಗೇನೂ ಗೊತ್ತಿಲ್ಲ ಅಂತ ಕೇಶವರೆಡ್ಡಿ ಜಾರಿಕೊಳ್ಳುತ್ತಿದ್ದ. ರೆಡ್ಡಿ ಏನನ್ನೋ ತನ್ನಿಂದ ಮುಚ್ಚಿಡುತ್ತಿದ್ದಾನೆ ಅನ್ನೋ ಅನುಮಾನ ಅವರಿಗೆ. ಸದಾ ನಂದ್ಯಾಲ ಘಟನೆ ಕುರಿತೇ ಯೋಚಿಸುತ್ತಿದ್ದರು.

## ಭಾಗ-2

ಬೆಳಿಗ್ಗೆ ಎಂಟರ ಹೊತ್ತಿಗೆ ಕಮಿಷನರ್ ಆಫೀಸಿನಲ್ಲಿ ಗಡಿಬಿಡಿ ಶುರುವಾಯಿತು. ಹತ್ತೂವರೆ ಹೊತ್ತಿಗೆ ಆಫೀಸಿಗೆ ಬರುತ್ತಿದ್ದ ಕಮಿಷನರ್ ಸಾಹೇಬರು ಅವತ್ತು ಬೇಗ ಬಂದರು. ಇಂಟರ್‌ಸ್ಟೇಟ್ ಇನ್‌ಫರ್ಮೇಷನ್ ಎಕ್ಸ್‌ಚೇಂಜ್ ಬ್ಯೂರೊದ ಚೀಫ್ ರಾಘವನ್ ಬರುತ್ತಾರೆನ್ನುವುದು ಅದಕ್ಕೆ ಕಾರಣ.

ದಕ್ಷಿಣದ ರಾಜ್ಯಗಳಲ್ಲಿ ಭಯೋತ್ಪಾದನೆ ಮತ್ತು ಸಮಾಜಘಾತುಕ ಚಟುವಟಿಕೆಗಳನ್ನು ನಿಯಂತ್ರಿಸುವ ಸಲುವಾಗಿ ಇಂಟೆಲಿಜೆನ್ಸ್ ಮಾಹಿತಿಗಳ ವಿನಿಮಯಕ್ಕಾಗಿ ಭಾರತ ಸರ್ಕಾರ ರಚಿಸಿದ್ದ ಬ್ಯೂರೊ ಮುಖ್ಯಸ್ಥ ರಾಘವನ್ ಮಿಲಿಟರಿ ಇಂಟೆಲಿಜೆನ್ಸ್‌ನಲ್ಲಿ ದುಡಿದ ಅನುಭವಿ. ಹೈದರಾಬಾದಿನ ಕಚೇರಿಯಲ್ಲೇ ಕೂತು, ಐದೂ ರಾಜ್ಯಗಳ ಇಂಟೆಲಿಜೆನ್ಸ್ ಮಾಹಿತಿಗಳನ್ನು ಪರಿಶೀಲಿಸಿ ಅವನ್ನು ಗಡಿ ಜಿಲ್ಲೆಗಳ ಹಿರಿಯ ಅಧಿಕಾರಿಗಳಿಗೆ ರವಾನಿಸುತ್ತ ಕಾನೂನು ಸುವ್ಯವಸ್ಥೆ ಕಾಪಾಡುವ ವಿಷಯದಲ್ಲಿ ಸಲಹೆ, ಸೂಚನೆ ಕೊಡುವ ಕೆಲಸ ಅವರದು. ಕಳೆದ ವಾರ ಗಮನಕ್ಕೆ ಬಂದ ಮಾಹಿತಿಯೊಂದು

